ಇಲ್ಲದೇ ಇರಬೇಕಾದರೆ ಮತ್ತೆಲ್ಲಿ ಹೋಗುತ್ತದೆ? ಅದು ನಿಮ್ಮದೇ ಕೆಲಸ. ಎಲ್ಲಿದೆ ಉಂಗುರ ಹೇಳಿ?' ಎಂದು ಸೀತಾರಾಮಯ್ಯನ ಹೆಂಡತಿ ಸರಸುವೂ ಗಟ್ಟಿಯಾಗಿ ಹೇಳಿದಾಗ ವೆಂಕಮ್ಮನಿಗೆ ಅದರ ಅರ್ಥ ಆಗುತ್ತಾ ಹೋದಂತೆ ಮೈಯೆಲ್ಲ ಬೆವರಲು ಶುರುವಾಗಿ ಕಣ್ಣು ಕತ್ತಲೆ ಬಂದ ಹಾಗಾಯಿತು. 'ಅಯ್ಯೋ ದೇವರೆ, ಉಂಗುರವಾ? ನನಗೆ ಗೊತ್ತಿಲ್ಲ. ನಾನು ತಗೊಂಡಿದ್ದಾ? ನಂಗ್ಯಾಕೆ ನಿನ್ನ ಉಂಗ್ರ? ಸುಮ್ಮನೇ ನನ್ನ ಮೇಲೆ ಕಳ್ಳತನದ ಆರೋಪ ಮಾಡಬೇಡ. ನಾನು ಯಾವ ಉಂಗುರವನ್ನು ನೋಡಲೂ ಇಲ್ಲ. ನನಗೆ ಗೊತ್ತೇ ಇಲ್ಲ' ಎಂದು ಗದ್ಗದಿತರಾಗಿ ಹೇಳಿದರು.

ಸಿಟ್ಟಿಗೆದ್ದ ಅಳಿಯ ಸೀತಾರಾಮಯ್ಯ, 'ಮೊದಲಿಂದ ನಿಮ್ಮನ್ನು ಬಲ್ಲೆ ನಾನು. ನಿಮ್ಮ ಮನೆತನವೇ ಹಾಂಗೆ. ಒಳ್ಳೆಯ ಮಾತಿನಿಂದ ಉಂಗುರ ಕೊಡ್ತೀರಾ ಇಲ್ವಾ?' ಎಂದು ಅಬ್ಬರಿಸಿದ ಸೀತಾರಾಮಯ್ಯನನ್ನೇ ದೀನಳಾಗಿ ನೋಡಿದರು. 'ಮಗೂ, ನನಗೇನು ಗೊತ್ತಿಲ್ಲ. ನಾವು ಬಡವರಿರಬಹುದು. ಆದರೆ ಕಳ್ಳತನ ಮಾಡುವಷ್ಟು ನೀಚರಲ್ಲ'. ಎಂದು ಹೇಳಿ ಬಿಕ್ಕಿದರು. ಆದರೆ ಸೀತಾರಾಮಯ್ಯ ಇದರಿಂದ ಕರಗುವ ಸ್ಥಿತಿಯಲ್ಲಿರಲಿಲ್ಲ. 'ಅತ್ತೆ, ನನಗೆಲ್ಲ ಗೊತ್ತು. ನೀವು ಆ ಕೋಣೆಗೆ ಹೋದದ್ದನ್ನು ಕಂಡವರಿದ್ದಾರೆ. ಉಂಗುರ ಎಲ್ಲಿ ಅಡಗಿಸಿಟ್ಟಿದ್ದೀರಿ? ಕೊಟ್ಟುಬಿಡಿ. ಇಲ್ಲದಿದ್ದರೆ ನಿಮ್ಮ ಬಟ್ಟೆಯನ್ನು ಬಿಚ್ಚಿ ಉಂಗುರ ಉದುರಿಸಬೇಕಾಗುತ್ತದೆ' ಎಂದಾಗಲಂತೂ ವೆಂಕಮ್ಮ ಹೌಹಾರಿದರು. 'ನಾನು ಕದಿಯಲಿಲ್ಲ ನಾನು ಕಳ್ಳಿ ಅಲ್ಲ' ಎಂದು ಪರಿಪರಿಯಾಗಿ ಅಂಗಲಾಚಿದರು. ಆದರೆ ಯಾರೂ ಕನಿಕರ ಸಹ ತೋರಿಸುವಂತೆ ಕಾಣಲಿಲ್ಲ. ನೆಂಟರೆಲ್ಲ ಸುತ್ತನೆರೆದು ನಾಟಕ ನೋಡುತ್ತಿದ್ದರು. ಕೆಲವರು ಅವರವರಷ್ಟಕ್ಕೇ ಏನೇನೋ ಮಾತಾಡುವುದು ವೆಂಕಮ್ಮನಿಗೆ ಕೇಳಿಸುತ್ತಿತ್ತು. 'ಅಯ್ಯೋ ದೇವರೆ, ಇಂತಹ ಮಾತನ್ನು ಕೇಳಲು ಇಲ್ಲಿಯವರೆಗೆ ಬರಬೇಕಾಯಿತೇ? ನನಗೆ ಸಾವು ಬರಬಾರದೇ' ಎಂದು ವೆಂಕಮ್ಮ ಹಲುಬಿದರು. 'ಇದೆಲ್ಲ ನಾಟಕ. ಬಡತನ ಏನು ಬೇಕಾದರೂ ಮಾಡಿಸುತ್ತದೆ' ಎಂದು ಯಾರೋ ಹಿಂದಿನಿಂದ ಹೇಳಿದರು. ಛೇ, ನಾನು ಯಾಕಾದರೂ ಇಲ್ಲಿಗೆ ಬಂದೆನೋ ಎನ್ನಿಸಿ 'ನಾನು ಕಳ್ಳಿಯಲ್ಲ, ಕಳ್ಳಿಯಲ್ಲ. ಎಲ್ಲಿ ಬೇಕಾದರೂ ಹೇಳುತ್ತೇನೆ. ಯಾವ ದೇವರ ಮುಂದೆ ಬೇಕಾದರೂ ಪ್ರಾಮಾಣ ಮಾಡುತ್ತೇನೆ. ನನ್ನನ್ನು ನಂಬಿ' ಎಂದು ಹಲುಬಿ ಕೂಗಿಕೊಳ್ಳುತ್ತಿರುವಾಗಲೇ ಯಾರೋ ಗಟ್ಟಿಯಾದ ದಡೂತಿ ಹೆಂಗಸೊಬ್ಬಳು ಅವರ ರಟ್ಟೆಯನ್ನು ಹಿಡಿದು ದರದರ ಹತ್ತಿರದ ಕೋಣೆಗೆ ಎಳೆದೊಯ್ದರು. ಅವರು ಹೌಹಾರಿ, ತನ್ನ ಸೀರೆಯ ನೆರಿಗೆಯನ್ನು ಗಟ್ಟಿಯಾಗಿ ಹಿಡಿದು 'ಬಿಡಿ ಬಿಡಿ' ಎನ್ನುತ್ತಿರುವಾಗಲೇ ಆ ಹೆಂಗಸು ಸೀರೆಯನ್ನು ದರದರ ಎಳೆಯುವಾಗ ಆದ ಸಂಕಟವನ್ನು ಹೇಗೆ ಹೇಳಲು ಸಾಧ್ಯ? ಕೊನೆಗೂ ವೆಂಕಮ್ಮನ ಸೀರೆ ಅವರ ದೇಹದಿಂದ ಬೇರ್ಪಟ್ಟು ನೆಲಕ್ಕೆ ಬಿದ್ದಾಗ ವೆಂಕಮ್ಮ ಗೋಳಾಡುತ್ತಾ ನೆಲಕ್ಕೆ ಬಿದ್ದರು. ಆದರೆ ಉಂಗುರ ಸಿಕ್ಕದೇ ಇದ್ದಾಗ ನಿರಾಶಳಾದ ಆ ಹೆಂಗಸು ವೆಂಕಮ್ಮನನ್ನು ತುಳಿದುಕೊಂಡೇ ಏನೇನೋ ಬೈಯುತ್ತಾ ಹೊರಗೆ ಹೋದಾಗ ವೆಂಕಮ್ಮ ಹತಾಶರಾಗಿ ಮೆಲ್ಲನೇ ಎದ್ದು ಸೀರೆಯನ್ನು ಸುತ್ತಿಕೊಂಡು ಮೂಲೆಯಲ್ಲಿ ಮುರುಟಿಕೊಂಡು ಕುಳಿತುಕೊಂಡರು. ರಾತ್ರಿ ಬೆಳಕು ನೀಡಲು ತಂದು ಸಾಲಾಗಿ ಇಟ್ಟ ಹತ್ತಾರು ಪೆಟ್ರೋಮ್ಯಾಕ್ಸ್‌ಗಳು ಇವರ ಪರಿಸ್ಥಿತಿಯನ್ನು ಕಂಡು ನಗುತ್ತಾ ಇದ್ದಂತೆ ಅವರಿಗೆ ಭಾಸವಾಯಿತು.

ಆದರೆ ಸೀತಾರಾಮಯ್ಯ ಉಂಗುರ ಕಳೆದುಕೊಂಡ ಹತಾಶೆಯಿಂದ ಇನ್ನೂ ಹೊರಬಂದಿರಲಿಲ್ಲ. ಅವನು ಮತ್ತೆ ಒಳಗೆ ಬಂದು, ಒಂದು ತೆಂಗಿನ ಕಾಯಿಯನ್ನು ಕೈಯಲ್ಲಿ